ಮತ್ತೊಬ್ಬ ಆಪಾದಿತ ನೌಕರನಾದ ಶ್ರೀ ಎಂ.ಕೆ. ಶೇಖ್ ಹುಸೇನ್ ಇವರು ಸಹ ಸರ್ಕಾರಿ ಆದೇಶ ಸಂಖ್ಯೆ : ಗ್ರಾಆಪ 374 ಸೇಶಿಕಾ 2000 ದಿನಾಂಕ: 28-6-2001 ರಲ್ಲಿ ಇಲಾಖಾ ವಿಚಾರಣೆ ಬಾಕಿ ಇಟ್ಟು ಸೇವೆಯಿಂದ ಅಮಾನತ್ತು ಗೊಳಿಸಲಾಗಿದೆ. ಇವರ ವಿರುದ್ಧವೂ ಸಹ ಇಲಾಖಾ ವಿಚಾರಣೆಯನ್ನು ಹೂಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಹೌದು.

ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು

2588(2934) ಪ್ರಭಾಕರ ಬಂಗೇರಾ ಕೆ. (ಬೆಳ್ತಂಗಡಿ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ಈಗಾಗಲೇ ಸರ್ಕಾರದಿಂದ ಮಂಜೂರಾಗಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳೆಷ್ಟು; ಅವುಗಳು ಯಾವುವು;

ಆ) ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ಇನ್ನೂ ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆ; ಅವುಗಳು ಯಾವುವು;

ಇ) ಕಾರ್ಯ ನಿರತ ಆರೋಗ್ಯ ಕೇಂದ್ರಗಳು ಸ್ವಂತ ಕಟ್ಟಡಗಳನ್ನು ಹೊಂದಿವೆಯೇ; ಹೌದಾದಲ್ಲಿ ಎಷ್ಟು ಕೇಂದ್ರಗಳಿಗೆ ಸ್ವಂತ ಕಟ್ಟಡಗಳಿವೆ, ಸ್ವಂತ ಕಟ್ಟಡಗಳಿಲ್ಲದ ಕೇಂದ್ರಗಳಿಗೆ ಯಾವಾಗ ಕಟ್ಟಡಗಳ ವ್ಯವಸ್ಥೆಗೊಳಿಸಲಾಗುವುದು?

ಡಾ: ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) 12 ಪ್ರಾಥಮಿಕ ಆರೋಗ್ಯ ಕೇಂದ್ರಗಳು

1) ನೆರಿಯಾ 2) ಕೊಕ್ಕಡ 3) ನಾರಾವಿ 4) ಉಜಿರೆ 5) ಹತ್ಯಡ್ಕ 6) ಪೇಣೂರು 7) ಧರ್ಮಸ್ಥಳ 8) ಮುಂಡಾಜೆ 9) ಅಳದಂಗಡಿ 10) ಪದಂಗಡಿ 11) ಇಂದ್ರಬೆಟ್ಟು 12) ರಾಣಿಯೂರು

ಆ) ಪ್ರಸ್ತಾವನೆ ಇರುವುದಿಲ್ಲ

ಇ) ಸ್ವಂತ ಕಟ್ಟಡವನ್ನು ಹೊಂದಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು 10 ಉಳಿದ ಎರಡು ಕೇಂದ್ರಗಳಿಗೆ 1) ಪದಂಗಡಿ ಮತ್ತು 2) ಇಂದ್ರಬೆಟ್ಟು ಕೇಂದ್ರಗಳಿಗೆ ಸ್ವಂತ ಕಟ್ಟಡ ಇರುವುದಿಲ್ಲ

ಈ ಎರಡು ಕೇಂದ್ರಗಳಿಗೆ ನಿವೇಶನ ಲಭ್ಯವಿಲ್ಲದೇ ಇರುವುದರಿಂದ ಅವುಗಳಿಗೆ ಕಟ್ಟಡ ಕಟ್ಟಲು ಕ್ರಮ ಕೈಗೊಂಡಿರುವುದಿಲ್ಲ.